ದಿನಾಂಕಃ 02.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **1 (ಎ)** ಮತ್ತು **2** ಮತ್ತು **4** ನೇ ಪ್ರತಿವಾದಿ ಪರ ಶ್ರೀ ಆರ್ ಕೆ ಟಿ ವಕೀಲರಿಂದಃ

ನಿಪಿ 79 ಯಾವ ದಿನಾಂಕದಂದು ತಯಾರು ಮಾಡಿದೆ ಎಂದು ಅದರಲ್ಲಿ ನಮೂದು ಆಗಿಲ್ಲ ಎಂದರೆ ಸರಿ . ನಿಪಿ 79 ನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ 80 ಐಡಿಯಲ್ ಐಡಿಯಲ್ ಡಿಸ್ಟಿಬ್ಯೂಟರ್ಸ್ ಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ . ನಿಪಿ 81 ರಿಂದ 87 ರವರೆಗೆ ಎಲ್ಲವೂ ಐಡಿಯಲ್ ಡಿಸ್ಟಿಬ್ಯೂಟರ್ಸ್ ಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ . ನಿಪಿ 88 ರಲ್ಲಿ ಐಡಿಯಲ್ ಡಿಸ್ಟಿಬ್ಯೂಟರ್ಸ್ ರವರು Fullertion India Credit Company Ltd., ನಿಂದ ಸಾಲ ಪಡೆದುಕೊಂಡ ಬಗೆಗಿನ ಅಕೌಂಟ್ ಸ್ಟೇಟ್ ಮೆಂಟ್ ಅಗಿರುತ್ತದೆ ಎಂದರೆ ಸರಿ . ನಿಪಿ 88 ಪರ್ಸನಲ್ ಲೋನ್ ಗೆ ಸಂಬಂಧಿಸಿದ್ದು ಎಂದು ಬರೆದಿದೆ ಎಂದರೆ ಸರಿ . ಸಾಲ ತೀರುವಳಿ ಆಗಿದೆ ಯಾವ ದಿನಾಂಕದಂದು , ಯಾವ ವರ್ಷದಂದು ಎಂದು ನನಗೆ ಹೇಳಲು ಆಗುವುದಿಲ್ಲ. ಸಾಲ ತೀರಿಸಿದ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ .

ನಿಪಿ 89 ಸಹ ಐಡಿಯಲ್ ಡಿಸ್ಟಿಬ್ಯೂಟರ್ಸ್ ನ ಪರ್ಸನಲ್ ಲೋನ್ ಗೆ ಸಂಬಂಧಿಸಿದ್ದು ಎಂದರೆ ಸರಿ . ಈ ಸಾಲವು ತೀರುವಳಿ ಆಗಿದೆ . ತೀರುವಳಿ ಆದ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅವಶ್ಯಕತೆ ಬಿದ್ದರೆ ಹಾಜರುಪಡಿಸುತ್ತೇನೆ .

ನಿಪಿ 90 ಧನಲಕ್ಷ್ಮಿ ಬ್ಯಾಂಕ್ ನಿಂದ ಐಡಿಯಲ್

ಡಿಸ್ಟ್ರಿಬ್ಯೂಟರ್ಸ್ ರವರು ಸಾಲ ಪಡೆದುಕೊಂಡ ಸಂಬಂಧದ ದಾಖಲೆ ಎಂದರೆ ಸರಿ . ನಿಪಿ 90 ರಿಂದ 107 ರವರೆಗೆ ಇರುವ ದಾಖಲೆಗಳು ಐಡಿಯಲ್ ಡಿಸ್ಟ್ರಿಬ್ಯೂಟರ್ಸ್ ಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ . ನಿಪಿ 80 ರಿಂದ 107 ದಾಖಲಾತಿಗಳು ಪ್ರತಿವಾದಿಗಳಿಗೆ ಸಂಬಂದಿಸಿದ ದಾಖಲಾತಿಗಳು ಅಲ್ಲ ಎಂದರೆ ಹೌದು . ಯಾವುದಾದರೂ ದಾಖಲೆಯಲ್ಲಿ ಪ್ರತಿವಾದಿಯವರು ಉಲ್ಲೇಖ ಇದೆಯೇ ಎಂದರೆ ಇಲ್ಲ . ಸಾಕ್ಷಿ ಮುಂದುವರೆದು 2015 ರಲ್ಲಿ ಹದಿಮೂರುವರೆ ಕೋಟಿ ಎಂಟು ಪ್ಲಾಟ್ ನ ಹಣ ಪಡೆದುಕೊಂಡಿದ್ದರು . ಆಗ ನಾನು ಸಾಲ ಪಡೆದುಕೊಳ್ಳುವ ಪರಿಸ್ಥಿತಿ ಬಂದಿತ್ತು ಎಂದು ಹೇಳುತ್ತಾರೆ .

2015 ರಲ್ಲಿ ಹದಿಮೂರುವರೆ ಕೋಟಿ ಎಂಟು ಪ್ಲಾಟ್ ನ ಹಣ ಪ್ರತಿವಾದಿಗಳು ಪಡೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 76 ರಿಂದ 107 ದಾಖಲಾತಿಗಳ ವರೆಗೆ ಯಾವುದರಲ್ಲೂ ದಾವಾ ಸ್ವತ್ತಿನ ಉಲ್ಲೇಖ ಇಲ್ಲ ಎಂದರೆ ಸರಿ. ನಿಪಿ 76 ರಿಂದ 107 ದಾಖಲಾತಿಗಳಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ 71 ಶೋಭಾ ಡೆವಲಪ್ಸ್ ರವರು ಅಭಿವೃದ್ದಿ ಪಡಿಸಿರುವ ಶೋಭಾ ಓಪಲ್ ಎಂಬ ಪ್ರಾಜೆಕ್ಟನ ಅಪಾರ್ಟ್ ಮೆಂಟ್ ಗೆ ಸಂಬಂಧಿಸಿದ ಕ್ರಯಪತ್ರ ಎಂದರೆ ಸರಿ . ಅದು ಡೆವಲಪ್ಸ್ ನಿಂದ ಖರೀದಿ ಮಾಡಿರುವವರು ಮತ್ತೊಬ್ಬರಿಗೆಮಾರಾಟ ಮಾಡಿರುವಂತಹ ಕ್ರಯಪತ್ರ ಎಂದರೆ ಇರಬಹುದು .

ಶೋಭಾ ಓಪಲ್ ಎಂಬ ಪ್ರಾಜೆಕ್ಟ್‌ನಲ್ಲಿ ಕ್ಲಬ್ ಹೌಸ್ , ಪ್ರೈವೇಟ್ ಗಾರ್ಡನ್ ಮುಂತಾದ ಸೌಲಭ್ಯಗಳು ಇವೆ ಎಂದರೆನನಗೆ ಗೊತ್ತಿಲ್ಲ. ನೀವೇ ಹಾಜರುಪಡಿಸಿರುವ ದಾಖಲೆಯಲ್ಲಿ ಕ್ಲಬ್ ಹೌಸ್ , ಪ್ರೈವೇಟ್ ಗಾರ್ಡನ್ ಅಂತ ಸೌಲಭ್ಯಗಳು ಇವೆ ಬರೆದಿದೆ ಎಂದರೆ ಸರಿ . ಶೋಭಾ ಓಪಲ್ ಪಾಜೆಕ್ಟ್ ನಲ್ಲಿರುವ ಸೌಲಭ್ಯಗಳಿಗೂ ದಾವಾ ಆಸ್ತಿಯಲ್ಲಿರುವ ಅಪಾರ್ಟ್ ಮೆಂಟ್ ನ ಸೌಲಭ್ಯಗಳಿಗೂ ವ್ಯತ್ಯಾಸವಿದೆ ಎಂದರೆ ನಾನು ಶೋಭಾ ಓಪಲ್ ಪ್ರಾಜೆಕ್ಟ್ ಗೆ ಹೋಗಿ ನೋಡಿಲ್ಲ .

ನಿಪಿ 71 ಕ್ರಯಪತ್ರ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಈ ಕೇಸಿಗೆ ಸಂಬಂಧಪಟ್ಟಿದ್ದು ಎಂದು ಹೇಳುತ್ತಾರೆ . ನಿಪಿ 72 ಸೈಟ್ ಗೆ ಸಂಬಂಧಿಸಿದ ಕ್ರಯಪತ್ರ ಅಪಾರ್ಟ್ ಮೆಂಟ್‌ಗೆ ಸಂಬಂಧಿಸಿದ ಕ್ರಯಪತ್ರವಲ್ಲ ಎಂದರೆ ಇರಬಹುದು . ನಿಪಿ 72 ಕೂಡ ದಾವಾ ಆಸ್ತಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಈ ಕೇಸಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ .

ದಿ ಃ 01.04.2016 ಕ್ಕೆ ದಾವಾ ಆಸ್ತಿಯ ಅಪಾರ್ಟ್ ಮೆಂಟ್ ಕಟ್ಟಡದ ಸರ್ಕಾರ ನಿಗದಿತ ಬೆಲೆ ಪ್ರತಿ ಚದುರ ಅಡಿಗೆ ರೂ . 6,330-00 ಇತ್ತು ಎಂದರೆ ಇರಬಹುದು . ಎಂ ಓ ಯು ನಂತೆ ನೀವು ಪ್ರತಿ ಚದುರ ಅಡಿಯನ್ನು ರೂ . 7,000-00 ರೂಪಾಯಿಗೆ ಮಾರಾಟ ಮಾಡಲು ಒಪ್ಪಿ ಕೊಂಡಿರುತ್ತೀರಿ ಎಂದರೆ ಸರಿ .

ನಿಮ್ಮಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಪ್ಯಾರಾ 18 ರಲ್ಲಿ ಹೇಳಿರುವ ಅಂಶಗಳು

ಸುಳ್ಳು ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.